27	ತುಮಕೂರು	4081	4042
28	ಉಡುಪಿ	1146	1144
29	ಉತ್ತರ ಕನ್ನಡ	2679	2575
30	ಯಾದಗಿರಿ	1300	1285
	ಒಟ್ಟು	**64518**	**63153**

ವಿವಿಧ ಇಲಾಖೆಗಳ ಜಾಹಿರಾತು

1477(2392); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

ಅ) ವಾರ್ತಾ ಮತ್ತು ಪ್ರಚಾರ ಇಲಾಖೆಯ ವತಿಯಿಂದ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಜಾಹೀರಾತುಗಳನ್ನು ಪ್ರಕಟಿಸಲು ಇರುವ ನಿಯಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)

ಆ) ಕಳೆದ 2 ವರ್ಷಗಳಲ್ಲಿ ಯಾವ ಇಲಾಖೆಯ ಜಾಹೀರಾತುಗಳನ್ನು ಪ್ರಕಟಿಸಲಾಗಿದೆ; ಇದಕ್ಕೆ ತಗುಲಿದ ವೆಚ್ಚವೆಷ್ಟು, (ವರ್ಷವಾರು, ಇಲಾಖಾವಾರು ಮಾಹಿತಿ ನೀಡುವುದು)

ಇ) ಸದರಿ ವರ್ಷಗಳಲ್ಲಿ ಯಾವ ವಿಧಗಳಿಂದ ವಿವಿಧ ಇಲಾಖೆಗಳ ಜಾಹೀರಾತುಗಳನ್ನು ಪ್ರಕಟಿಸಲಾಗಿದೆ; (ಜಾಹೀರಾತು ವಿಧಗಳವಾರು, ವರ್ಷವಾರು ಮಾಹಿತಿ ನೀಡುವುದು)

ಈ) ಸದರಿ ಜಾಹೀರಾತುಗಳಿಂದ ಸಾರ್ವಜನಿಕರಿಗೆ ಆಗಿರುವ ಅನುಕೂಲಗಳೇನು (ಇದರ ಬಗ್ಗೆ ವಾರ್ತಾ ಇಲಾಖೆಯು ನಡೆಸಿರುವ ಸಮೀಕ್ಷೆಯ ಪ್ರತಿಯನ್ನು ನೀಡುವುದು);

ಶ್ರೀ ಆರ್. ರೋಷನ್ ಬೇಗ್ (ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು)

ಅ) ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಜಾಹೀರಾತುಗಳನ್ನು ಪ್ರಕಟಿಸಲು ಜಾಹೀರಾತು ನೀತಿ–2013ನ್ನು ಸರ್ಕಾರದ ಆದೇಶ ಸಂ: ಕಸಂವಾಪ್ರ/

8/ವಾಪ್ರಜಾ/2013 ನ್ನು ಜಾರಿಗೆ ತರಲಾಗಿದೆ. ದಿನಾಂಕ:10–09–2014 ಹಾಗೂ ಇದಕ್ಕೆ ದಿನಾಂಕ 08–05–2015 ರಂದು ಮಾರ್ಗಸೂಚಿ ನಿಯಮಗಳನ್ನು ರೂಪಿಸಿದೆ.

ಆ) ಸಾಮಾನ್ಯವಾಗಿ ವಾರ್ತಾ ಇಲಾಖೆಯ ಮೂಲಕ ವಿಷಯವಾರು ಮತ್ತು ಕಾರ್ಯಕ್ರಮವಾರು ಜಾಹೀರಾತುಗಳನ್ನು ಬಿಡುಗಡೆ ಮಾಡಲಾಗುತ್ತದೆ. ಇದರಿಂದಾಗಿ ಇಲಾಖಾವಾರು ವೆಚ್ಚದ ವಿಂಗಡೆ ಮಾಹಿತಿ ಲಭ್ಯವಿರುವುದಿಲ್ಲ.

ಇದಕ್ಕಾಗಿ ಒಟ್ಟಾರೆಯಾಗಿ ವಾರ್ತಾ ಇಲಾಖೆಗೆ ತಗುಲಿದ ವೆಚ್ಚದ ವಿವರ ಇಂತಿದೆ:

ವರ್ಷ	ಉಂಟಾದ ವೆಚ್ಚದ ಮೊತ್ತ
2013–14	18.34 ಕೋಟಿ
2014–15	18.95 ಕೋಟಿ

ಇ) ಸದರಿ ವರ್ಷಗಳಲ್ಲಿ ಸರ್ಕಾರದ ವಿವಿಧ ವಿಷಯಗಳ ಜಾಹೀರಾತನ್ನು ಕೆಳಕಂಡ ಎರಡು ವಿಧಗಳಲ್ಲಿ ಬಿಡುಗಡೆ ಮಾಡಲಾಗಿದೆ.

1) ಟೆಂಡರ್ ಮತ್ತು ವರ್ಗೀಕೃತ ಜಾಹೀರಾತು (Tender & Classified Advertisement)

2) ಆಕರ್ಷಕ ಜಾಹೀರಾತು (Display Advertisement)

ವಿವರಗಳು ಇಂತಿವೆ:

ವರ್ಷ	ಟೆಂಡರ್ ಜಾಹೀರಾತು ಸಂಖ್ಯೆ	ಆಕರ್ಷಕ ಜಾಹೀರಾತು ಸಂಖ್ಯೆ
2013–14	2275	75
2014–15	3014	65

ಈ) ಸದರಿ ಜಾಹೀರಾತುಗಳ ಪೈಕಿ ಟೆಂಡರ್ ಜಾಹೀರಾತುಗಳಿಂದ ಸಾರ್ವಜನಿಕರಿಗೆ ಸರ್ಕಾರವು ವಿವಿಧ ಇಲಾಖೆಗಳ ಮುಖಾಂತರ ಹಮ್ಮಿಕೊಳ್ಳುವ ಕಾಮಗಾರಿಗಳ ಬಗ್ಗೆ ಮಾಹಿತಿ ದೊರಕುವುದು.

ಅಂತೆಯೇ ಆಕರ್ಷಕ ಜಾಹೀರಾತುಗಳಿಂದ ಸರ್ಕಾರವು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ರೂಪಿಸಿರುವ ಯೋಜನೆಗಳ ಕುರಿತು ಸಾರ್ವಜನಿಕರಿಗೆ ಅದರಲ್ಲೂ ವಿಶೇಷವಾಗಿ ಯೋಜನೆಗಳ ಉದ್ದೇಶಿತ ಜನ ಸಮುದಾಯಗಳಿಗೆ ಮಾಹಿತಿ ದೊರೆತು ಆ ಯೋಜನೆಗಳ ಫಲಾನುಭವಿಗಳಾಗಲು ಸಾಧ್ಯವಾಗುವುದು.

ವಾರ್ತಾ ಇಲಾಖೆಯ ವತಿಯಿಂದ ಸದರಿ ಜಾಹೀರಾತುಗಳಿಂದ ಸಾರ್ವಜನಿಕರಿಗೆ ಆಗಿರುವ ಅನುಕೂಲಗಳ ಬಗ್ಗೆ ಕಳೆದ ಎರಡು ವರ್ಷಗಳಲ್ಲಿ ಸಮೀಕ್ಷೆ ನಡೆಸಿರುವುದಿಲ್ಲ. ಪ್ರಸಕ್ತ ವರ್ಷ ಈ ಸಮೀಕ್ಷೆಯನ್ನು ಕೈಗೊಳ್ಳಲಾಗುವುದು.

ಪ್ರವಾಸಿ ತಾಣಗಳು

1478(2393); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿ ಗುರುತಿಸಲಾಗಿರುವ ಪ್ರವಾಸಿ ತಾಣಗಳಾವುವು; (ತಾಲ್ಲೂಕುವಾರು ಮಾಹಿತಿ ನೀಡುವುದು);

ಆ) ಕಳೆದ 3 ವರ್ಷಗಳಲ್ಲಿ ಈ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿದ ಅನುದಾನವೆಷ್ಟು; (ಪ್ರವಾಸಿ ತಾಣವಾರು ಮಾಹಿತಿ ನೀಡುವುದು);

ಇ) ಸದರಿ ಪ್ರವಾಸಿ ತಾಣಗಳನ್ನು ಪ್ರಚಾರ ಪಡಿಸಲು ಸರ್ಕಾರ ರೂಪಿಸಿರುವ ಯೋಜನೆಗಳಾವುವು; (ಪ್ರವಾಸ ತಾಣವಾರು ಮಾಹಿತಿ ನೀಡುವುದು)